O.S. NO. 161/2023

PW - 1 .

Dated 02-07-2025

ಸಾಕ್ಷಿಯನ್ನು ಈ ದಿನ ದಿನಾಂಕ 02-07-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ವಕೀಲರಿಂದಃ

3 ನೇ ವಾದಿ 1 ನೇ ಪ್ರತಿವಾದಿ ಮೇಲೆ ದೊಡ್ಡವಾಡ ಪೊಲಿಸ ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ದೂರಿನ ಆಧಾರದ ಮೆಲೆ ಪೊಲಿಸರು ಬೈಲಹೊಂಗಲ ಜೆ ಎಮ ಎಫ ಸಿ ನ್ಯಾಯಾಲಯದಲ್ಲಿ ಚಾರ್ಜಶೀಟ ಸಲ್ಲಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು 1 ನೇ ಪ್ರತಿವಾದಿ ಮೇಲೆ ಜೆ ಎಮ ಎಫ ಸಿ ನ್ಯಾಯಾಲಯದಲ್ಲಿ ಕ್ರಿ ಮಿ ನಂ 291/2023 ರಿತ್ಯ ಪೊಟಗಿಗಾಗಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. 1 ನೇ ಪ್ರತಿವಾದಿ ಮೇಲೆ ಪೊಲಿಸ ದುರು ಕೊಟ್ಟ ಮಾರನೇ ದಿನವೇ ಸದರಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ಪೊಲಿಸ ದುರು ಮರನೇ ದಿನ ಪ್ರಸ್ತುತ ಕೇಸು ವಿಷಯ ನನಗೆ ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಅನುಕ್ರಮ ನಂ 2 ಮತ್ತು 4 ರಲ್ಲಿ ಹಿಸ್ಸೆ ಕೇಳಬೇಕೆಂಬ ದುರುದ್ದೇಶದಿಂದ ಇದೊಂದು ಖೊಟ್ಟಿ ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಆಸ್ತಿಗಳು ನಾವೇ ಗಳಿಸಿದ್ದು ಇರುತ್ತವೆ ಎಂದು ಸ್ವತಃ ನುಡಿದಿರುತ್ತಾರೆ. ನಾಗಪ್ಪ ತನ್ನ ಜೀವತ ಕಾಲದಲ್ಲಿ 1 ನೇ ಪ್ರತಿವಾದಿ ಗೆ ಒಳ್ಳೆಯದಾಗಲಿ ಅಂತಾ 1 ನೇ ಪ್ರತಿವಾದಿ ಹೆಸರಿಗೆ ಅನುಕ್ರಮ ಆಸ್ತಿ ನಂ 2 ಮತ್ತು 4 ಖರೀದಿ ಮಾಡಿರುತ್ತಾರೆ ಎಂದರೆ ಸುಳ್ಳು. ದಾವಾ ಆಸ್ತಿ ಗಲ್ಲಿ ಪ್ರತಿವಾದಿಯರಿಗೆ ಯಾವಾಗ

O.S. NO. 161/2023

PW - 1 .

Dated 02-07-2025

ಪಾಲು ಕೇಳಿದ್ದೀರಿ ಎಂದರೆ ನಾನು ಶಾಲೆ ಕಲಿತಿಲ್ಲ ಹೀಗಾಗಿ ನನಗೆ ಹೇಳಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಗೆ ಸೇರಿದ ಹೆಸರಿನಲ್ಲಿರುವ ಇರುವ ಆಸ್ತಿಯಲ್ಲಿ ಹಿಸ್ಸೆ ಕೇಳಬೇಕೆಂದು ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಫ್ರಾಕ್ಷಿ ವಕೀಲರು 2 ನೇ ಪ್ರತಿವಾದಿ ಪರ ಪಾಟಿ ಸವಾಲಿಗೆ ಕಾಲಾವಕಾಶ ಕೊರಿದ್ದು, ಯಾವುದೇ ಸಕಾರಣ ನೀಡದೇ ಇರುವುದರಿಂದ ಅವರ ಮನವಿಯನ್ನು ತಳ್ಳಿ ಹಾಕಿ 2 ನೇ ಪ್ರತಿವಾದಿ ಪರ ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ತೆಗೆದು ಕೊಳ್ಳಲಾಯಿತು.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.